ಸಿ. ಸಿ. ನಂ.- 92/21

ಸಿ.ಡಬ್ಲ್ಯೂ.- 5 / ಪಿ.ಡಬ್ಲ್ಯೂ.- 5

1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 01-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಶ್ರೀಕಾಂತ ಕುಲಕರ್ಣಿ |
| ತಂದೆಯ ಹೆಸರು - | ಪ್ರಹ್ಲಾದ್ ರಾವ್ ಕುಲಕರ್ಣಿ |
| ವಯಸ್ಸು - | 65 ವರ್ಷಗಳು |
| ಉದ್ಯೋಗ - | ನಿವೃತ್ತ ಬ್ಯಾಂಕ್ ನೌಕರ |
| ವಾಸಸ್ಥಳ - | ಹೊಸಪೇಟೆ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಸಾಕ್ಷಿ ನಿಪಿ-7 ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.-7-ಸಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-11, ನಿಪಿ-12 ಭಾವಚಿತ್ರಗಳಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ದಿಃ 15.03.2016 ರಂದು ಬಡಾವಣೆ ಪೊಲೀಸ್ ಠಾಣೆಗೆ ನನ್ನನ್ನು ಕರೆಸಿದ್ದರು ಅಲ್ಲಿ ಚಾಸಾ.1, 4 ರವರು ಇದ್ದರು. ಅಲ್ಲಿ 26 ವೋಚರ್ ಗಳನ್ನು ಚಾಸಾ.1 ಮತ್ತು 4 ರವರು ಕೊಟ್ಟರು. ಅದನ್ನು ಪೊಲೀಸರು ನಮ್ಮ ಸಮಕ್ಷಮ ಪರಿಶೀಲಿಸಿದರು. ನಮ್ಮಲ್ಲಿ ಎಸ್ ಡಬ್ಲ್ಯೂ ಎ ರವರು ಫ್ರಾಡ್ ಮಾಡಿದ್ದರಿಂದ ಈ ವೋಚರ್ ಗಳನ್ನು ಪೊಲೀಸರಿಗೆ ಕೊಡಲಾಗಿತ್ತು. ಅವುಗಳನ್ನು ನೋಡಿದರೆ ನಾನು ಗುರುತಿಸಬಲ್ಲೆ. ಸಾಕ್ಷಿ ನಿಪಿ-20 ರಿಂದ 24 ದಾಖಲೆಗಳನ್ನು ನೋಡಿ ಗುರುತಿಸಿ, ಅಲ್ಲಿ ಒಟ್ಟು ಕ್ಯೂ.1 ರಿಂದ ಕ್ಯೂ.26 ವೋಚರ್ ಗಳು ಇದ್ದವು ಎಂದು ನುಡಿಯುತ್ತಾರೆ. ಹೀಗೆ ಈ ಪಂಚನಾಮೆಯನ್ನು ಮಧ್ಯಾಹ್ನ 2.00 ರಿಂದ 2.30 ಗಂಟೆಗೆಯವರೆಗೆ ಜರುಗಿಸಲಾಯಿತು.

ಸಾಕ್ಷಿ ನಿಪಿ-10 ಪಂಚನಾಮೆಯಲ್ಲಿರುವ ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.-10-ಸಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-8 ಮತ್ತು ನಿಪಿ-9 ಭಾವಚಿತ್ರಗಳಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ಹಾಗೂ ಭಾವಚಿತ್ರಗಳನ್ನು ಆರೋಪಿಗೆ ಸಂಬಂಧಪಟ್ಟಂತಹ ಇನ್ನು ಕೆಲವು ವೋಚರ್ ಗಳನ್ನು ಕೊಟ್ಟದ್ದಕ್ಕೆ ಸಂಬಂಧಪಟ್ಟಂತೆ ಪಡೆಯಲಾಯಿತು. ಅದನ್ನುಹೊರತುಪಡಿಸಿ ಆರೋಪಿಗೆ ಸಂಬಂಧಪಟ್ಟ ಬೇರೆ ಯಾವ ದಾಖಲೆಗಳನ್ನು ನನ್ನ ಸಮಕ್ಷಮ ಹಾಜರುಪಡಿಸಿದರು ಎಂದು ನನಗೆ ಗೊತ್ತಿಲ್ಲ. ಒಟ್ಟು ಎಷ್ಟು ದಾಖಲೆಗಳನ್ನು ಈ ಪಂಚನಾಮೆ ಮುಖಾಂತರ ಪಡೆಯಲಾಗಿತ್ತು ಎಂದು ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು, ಅಂದಾಜು 26 ಮತ್ತು 8 ದಾಖಲೆಯನ್ನು ಹಾಜರುಪಡಿಸಿರಬಹುದು ಎಂದು ನುಡಿಯುತ್ತಾರೆ. ಆ ದಾಖಲೆಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಸ್ವತಃ 7 ಗ್ರಾಹಕರ ಖಾತಾ

ಸಿ. ಸಿ. ನಂ.- 92/21

ಸಿ.ಡಬ್ಲ್ಯೂ.- 5 / ಪಿ.ಡಬ್ಲ್ಯೂ.- 5

ವಿವರವನ್ನು ಪಡೆದಿರುತ್ತಾರೆ. ಸಾಕ್ಷಿ ನಿಪಿ-25 ರಿಂದ 35 ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಪಂಚನಾಮೆಯನ್ನು ಅಂದಾಜು 11.30 ರಿಂದ 12.30 ರವರೆಗೆ ಜರುಗಿಸಲಾಯಿತು.

ಪಾಟೀ ಸವಾಲು- ಆರೋಪಿತರ ಪರ ವಕೀಲರಾದ ಶ್ರೀ ಜಿ ವಿ ಪಿ ರವರಿಂದ-

ನಾನು ಬ್ಯಾಂಕ್ ನಲ್ಲಿ ಪ್ಯೂಯನ್ ಕೆಲಸ ಮಾಡುತ್ತಿದ್ದೆ. ನಾನು ನಮ್ಮ ಬ್ಯಾಂಕಿನ ವ್ಯವಸ್ಥಾಪಕರು ಹೇಳಿದ ಮಾತನ್ನು ಕೇಳುತ್ತೇನೆ ಎಂದರೆ ಸರಿ. ಅವರ ಆದೇಶದ ಮೇರೆಗೆ ನಾನು ಪೇಪರ್ ಗಳ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಅದರಲ್ಲಿ ಎಲ್ಲಾ ಪುಟಗಳಲ್ಲಿ ಬರೆದ ಸಂಗತಿಗಳ ಮಾಹಿತಿ ನನಗೆ ಇಲ್ಲ ಎಂದರೆ ಸಾಕ್ಷಿ ಪ್ರತಿಯೊಂದು ಸಂಗತಿಗಳ ಮಾಹಿತಿ ಅಷ್ಟಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹೀಗೆ ಪೊಲೀಸ್ ಠಾಣೆಯಲ್ಲಿ ದಾಖಲೆಗಳನ್ನು ಪಡೆದ ಸಮಯದಲ್ಲಿ ನಾನು, ಚಾಸಾ.1 ಹಾಗೂ ಪೊಲೀಸ್ ಅಧಿಕಾರಿಗಳು ಸಹಿ ಮಾಡಿದ ಪೇಪರ್ ನ್ನು ಪೊಲೀಸರು ಪಡೆದುಕೊಂಡಿರುತ್ತಾರೆ ಎಂಬುದು ನನಗೆ ಗೊತ್ತು. ಆ ದಿನ ದಾಖಲೆಗಳನ್ನು ಯಾರು ಹಾಜರುಪಡಿಸಿದರು ಎಂದು ನನಗೆ ಗೊತ್ತಿಲ್ಲ. ನಿಪಿ-20 ರಿಂದ 35 ದಾಖಲೆಗಳ ಮೇಲೆ ನನ್ನದಾಗಲೀ, ಚಾಸಾ.1 ರವದ್ದಾಗಲೀ ಅಥವಾ ಪೊಲೀಸ್ ಅಧಿಕಾರಿದ್ದಾಗಲೀ ಸಹಿ ಇಲ್ಲ ಎಂದರೆ ಸರಿ. ಆ ದಿನ ಪೊಲೀಸ್ ಠಾಣೆಯಲ್ಲಿ ನಾನು ಒಂದೇ ಸಹಿ ಮಾಡಿರುತ್ತೇನೆ. ಹೀಗೆ ನೀವು ಸಹಿ ಮಾಡಿದ ಹಾಳೆ ನೀವು ಸಹಿ ಮಾಡುವ ಕಾಲಕ್ಕೆ ಖಾಲಿ ಇತ್ತೇ ಎಂದರೆ ಸಾಕ್ಷಿ ಅದರಲ್ಲಿ ಬರವಣಿಗೆ ಇದ್ದರೂ ಇರಬಹುದು, ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಗಳಲ್ಲಿ ಬರೆದಿರುವ ಮಾಹಿತಿಗಳ ಬಗ್ಗೆ ನನಗೆ ವೈಯಕ್ತಿಕವಾದ ತಿಳುವಳಿಕೆ ಇಲ್ಲದಿದ್ದರೂ ವ್ಯವಸ್ಥಾಪಕರ ಮಾತು ಕೇಳಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಅವರು ನನ್ನ ಮೇಲಾಧಿಕಾರಿ ಎಂದು ನುಡಿಯುತ್ತಾರೆ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ವ್ಯವಸ್ಥಾಪಕರ ಮಾತು ಕೇಳಿ ನಾನು ಸಾಕ್ಷ್ಯ ನುಡಿಯಲು ಬಂದಿದ್ದೇನೆ ಎಂದರೆ ಸರಿ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.